# ಹರಿಹರನ ರಗಳೆಗಳಲ್ಲಿ ಆಹಾರ ಪರಿಕಲ್ಪನೆಯ ವೈವಿಧ್ಯತೆ

ಡಾ. ನೂರಂದಪ್ಪ ಪಡಶೆಟ್ಟಿ
ಕನ್ನಡ ವಿಭಾಗ
ವಿಶ್ವವಿದ್ಯಾನಿಲಯ ಕಾಲೇಜು, ನೆಲ್ಯಾಡಿ
ತಾ. ಕಡಬ ಜಿಲ್ಲಾ: ದಕ್ಷಿಣ ಕನ್ನಡ ೫೭೪೨೨೯
ಮೊಬೈಲ್: ೭೩೪೯೧೦೨೫೬೮

"ಒಡಲ ಕಳವಳಕ್ಕೆ, ಬಾಯ ಸವಿಗೆ
ಬಯಸಿ ಉಂಡೆನಾದಡೆ ನಿಮ್ಮ ತೊತ್ತಿನ ಮಗನಲ್ಲ,
ಬೇಡ ಬೇಡ ನಿಮ್ಮ ನಂಬಿದ ಸದ್ಭಕ್ತರ
ಅವರೊಕ್ಕುದನುಂಬೆನೆಂದಂತೆ ನಡೆವೆ
ಎನ್ನೊಡೆಯ ಕೂಡಲಸಂಗಮದೇವನೊಲ್ಲದವರ
ಹಿಡಿದೆನಾದೆಡೆ ನಿಮ್ಮ ಪಾದದಾಣೆ"

ಬಸವಣ್ಣನವರ ಈ ವಚನವು ಹರಿಹರನ ರಗಳೆಗಳಲ್ಲಿ ವ್ಯಕ್ತವಾಗುವ ಭಕ್ತನ ಒಡಲು ಮತ್ತು ಭಕ್ತಿಯ ನಿಷ್ಠೆಯನ್ನು ಪ್ರತಿನಿಧಿಸುವ ಕಾರಣ ರಗಳೆಗಳಲ್ಲಿ ಕಂಡುಬರುವ ಆಹಾರ ಪರಿಕಲ್ಪನೆಯ ಹಿನ್ನಲೆಯಲ್ಲಿ ಈ ವಚನವು ಮಹತ್ವವಾಗಿ ಕಂಡುಬರುತ್ತದೆ. ಹರಿಹರನ ಕಾವ್ಯಗಳಲ್ಲಿ ಬರುವ ಅನೇಕ ಸಂಗತಿಗಳು ಶಿವನ ಮೇಲಿರುವ ಭಕ್ತಿಯ ಅಭಿವ್ಯಕ್ತಿಗೆ ಪೂರಕವಾಗಿ ಪ್ರಸ್ತಾಪವಾಗುತ್ತವೆ. ಶರಣರ ಜೀವನವನ್ನು ಅಲೌಕಿಕವಾದ ರೀತಿಯಲ್ಲಿ ವರ್ಣಿಸಲು ಪೌರಾಣಿಕವಾದ ಆರಂಭವನ್ನು ನಿರೂಪಣೆಯಲ್ಲಿ ತಂದರೂ ಕೂಡ ಜನನದ ನಂತರ ಬಿತ್ತರವಾಗುವ ಹಂತಗಳೆಲ್ಲವೂ ಲೌಕಿಕತೆಗೆ ಒಗ್ಗಿಕೊಳ್ಳುತ್ತವೆ. ಕೈಲಾಸದಲ್ಲಿ ಗಣಧರ ಮತ್ತು ಸುರಕನ್ಯೆ ಅಥವಾ ರುದ್ರಕನ್ಯೆಯರ ನಡುವೆ ಉಂಟಾದ ಪರಸ್ಪರ ಮೋಹಗಳ ವರ್ಣನೆಯನ್ನು ಮನದುಂಬಿ ವರ್ಣಿಸಲು ಆಸಕ್ತಿಯಿದ್ದರೂ ಕೂಡ ಅಲ್ಲಿ ಅಸಹಾಯಕನಾಗಿ ಅವರನ್ನು ಭೂಮಿಗೆ ಕರೆತಂದು ಅವರ ಯೌವನಾವಸ್ಥೆಯನ್ನು ವರ್ಣಿಸಿ ಹರಿಹರನು ಸಂತುಷ್ಟನಾಗುತ್ತಾನೆ. ಶರಣರ ಜೀವನದ ಐಹಿಕ ಬೇಡಿಕೆಗಳು ಮತ್ತು ದೈವದ ಒಲವಿಗೆ ಅನುಗುಣವಾಗಿರುವ ಬೇಡಿಕೆಗಳನ್ನು ಅಬೇಧ್ಯವೆಂಬಂತೆ ಚಿತ್ರಿಸುವುದರಲ್ಲಿ ವಚನ ಸಾಹಿತ್ಯಕ್ಕೆ ಹರಿಹರನು ಋಣಿಯಾಗಿದ್ದಾನೆ.

ಕೇವಲ ಬಸವಣ್ಣನಷ್ಟೇ ಅಲ್ಲದೇ ಪ್ರಭುದೇವ, ಅಕ್ಕಮಹಾದೇವಿ, ನಂಬಿಯಣ್ಣ, ತಿರುನೀಲಕಂಠ, ಇಳೆಯಾಂಡಗುಡಿಮಾರ, ಕರಿಕಾಲಮ್ಮೆ, ಅತಿಭಕ್ತ, ಆದಯ್ಯ, ಶಂಕರ ದಾಸಿಮಯ್ಯ, ರೇವಣಸಿದ್ದೇಶ್ವರ ಮುಂತಾದ ಶರಣರ ಕುರಿತ ರಗಳೆಗಳಲ್ಲಿ ಒಡಲ ಕಳವಳಕ್ಕೆ, ಬಾಯ ಸವಿಗೆ, ಬಯಸಿ ಉಣದ ಕಾವ್ಯನಾಯಕರನ್ನೇ ಕಾಣುತ್ತೇವೆ. ಬೇಡಿ ಬೇಡಿ ಸದ್ಭಕ್ತರು ನೀಡಿದುದನ್ನೇ ಆಹಾರವನ್ನಾಗಿ ಸ್ವೀಕರಿಸಿದ ಮತ್ತು ಆಹಾರದಲ್ಲಿ ಭೇದ ಭಾವವಿಲ್ಲದ ಸಂಗತಿಗಳನ್ನು ಪ್ರತಿಪಾದಿಸಲಾಗಿದೆ. ಅನೇಕ ಕಡೆ ದೈವಸ್ವರೂಪದ ಪ್ರತಿನಿಧಿಯಾಗಿ ಶಿವನು ನೇರವಾಗಿ ಸಾಮಾನ್ಯ ಭಕ್ತನ ಮನೆಯ ಆಹಾರ ಸವಿದು ತನ್ನ ಆಹಾರಕ್ಕೂ ಭಕ್ತನ ಆಹಾರಕ್ಕೂ ಭೇದವಿಲ್ಲದ ರೀತಿಯಲ್ಲಿ ಶಿವನ ಚಿತ್ರಣವನ್ನು ಹರಿಹರನು ಚಿತ್ರಿಸಿದ್ದಾನೆ.

ಹರಿಹರನು ಆಹಾರದ ಸಂಗತಿಯನ್ನು ಪ್ರಧಾನವಾಗಿ ಹೆಚ್ಚಾಗಿ ತರುವುದಿಲ್ಲ. ತಂದರೂ ಕೂಡ ಭಕ್ತಿಯ ಅಭಿವ್ಯಕ್ತಿಗೆ ಪೂರಕವಾಗಿ ಪ್ರಸಾದ, ಬೋನ(ನೈವೇದ್ಯ), ಅಭಿಷೇಕ, ಅಮೃತಾನ್ನ ಮುಂತಾದ ಈ ಪರಿಕಲ್ಪನೆಗಳನ್ನು ಆಹಾರದ ಸ್ವರೂಪದಲ್ಲಿ ಸಂದರ್ಭಕ್ಕೆ ತಕ್ಕಂತೆ ವಿವರಿಸಿದ್ದಾನೆ. ಸಾಮಾನ್ಯ ಭಕ್ತನೊಬ್ಬನ ಆಹಾರ ಕ್ರಮದಲ್ಲಿರುವ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವಲ್ಲಿ ಹರಿಹರನ ರಗಳೆಗಳು ಮುಖ್ಯ ಆಕರಗಳಾಗಿವೆ. ಮಾದಾರ ಚೆನ್ನಯ್ಯನ ಅಂಬಲಿ, ಆದಯ್ಯನ ಪ್ರೇಯಸಿ ಪದ್ಮಾವತಿ ಮಾಡುವ ಮಾಡುವ ಅಮೃತಾನ್ನ, ರೇವಣಸಿದ್ಧ ಸ್ವೀಕರಿಸುವ ದೇವಾನ್ನ, ರುದ್ರಪಶುಪತಿ ಮಾಡುವ ಪಂಚಾಮೃತ, ಶಂಕರ ದಾಸಿಮಯ್ಯನ ಭಕ್ತಿಯಮೃತ, ಅತಿಭಕ್ತನು ಅರ್ಪಿಸುವ ಮೊದಲ ಮೀನು ಮುಂತಾದ ಆಹಾರ ಪದಾರ್ಥಗಳೆಲ್ಲವೂ ಭಕ್ತನ ಮೂಲಕ ದೈವಕ್ಕೆ ಸಲ್ಲುವ ಮೂಲಕ ಶ್ರೇಷ್ಠತೆಗೆ ಪಾತ್ರವಾಗುತ್ತವೆ.

ಅನೇಕ ಭಕ್ಷ್ಯಗಳನ್ನು ಬೋನದ ರೀತಿಯಲ್ಲಿ ನೀಡುವ ಚೋಳರಾಜ ಮತ್ತು ಸೌಂದರ ಪೆರುಮಾಳನಾಗಿದ್ದ ನಂಬಿಯಣ್ಣನೆಂಬ ಯುವರಾಜನ ಮದುವೆ ಮಂಟಪದಲ್ಲಿ ಚೆಲ್ಲುವ ತುಪ್ಪದ ಮಡಕೆಗಳಾಗಲಿ, ತಿರುನೀಲಕಂಠನ ಹೆಂಡತಿಯು ಸಿರಿಮಂಚವನು ಹಾಸಿ ಎಡೆಮಾಡಿ ಹಿಡಿಯುವ ಬೋನವಾಗಲಿ ಈ ಎಲ್ಲಾ ಆಹಾರಗಳ ಮೌಲ್ಯ, ಶ್ರೇಷ್ಠತೆಯು ನಿರ್ಧಾರವಾಗುವುದು ಶಿವನ ಸ್ವೀಕಾರದ ಮನೋಭಾವದಲ್ಲಿ. ಚೋಳರಾಜನ ಭೂರಿ ಭಕ್ಷ್ಯಗಳೆಲ್ಲವೂ ವ್ಯರ್ಥವಾದರೂ ಸರಿ ಚೆನ್ನಯ್ಯನ ಅಂಬಲಿಯೇ ಶಿವನಿಗೆ ಸ್ವೀಕಾರಾರ್ಹವಾಗುತ್ತದೆ. ನಂಬಿಯಣ್ಣನೆಂಬ ಸೌಂದರ ಪೆರುಮಾಳ್‌ನ ಯುವರಾಜನ ಮದುವೆ ಮಂಟಪದಲ್ಲಿನ ತುಪ್ಪದ ಮಡಕೆಗಳು ಶಿವನ

ಚೆಲ್ಲಾಟದಲ್ಲಿ ವ್ಯರ್ಥವಾದರೂ ಸರಿ ನಂಬಿಯಣ್ಣನಲ್ಲಿದ್ದ ಸಿರಿತನವೆಂಬ ಗರ್ವದ ತೆರೆ ಸರಿಯುವುದೇ ಮುಖ್ಯವಾಗುತ್ತದೆ. ಶ್ರಮದ, ಕಾಯಕದ ಪರಿಶ್ರಮವಾಗಿ ಬರುವ ಯಾವುದೇ ಆಹಾರವಾದರೂ ಕೂಡ ಸ್ವೀಕಾರಾರ್ಹವಾಗಿರುತ್ತದೆಂಬುದನ್ನ ಹರಿಹರನು ಆಹಾರವನ್ನು ಅಮೃತವಾಗಿಸುವ ಪ್ರಕ್ರಿಯೆಯಲ್ಲಿ ಕಾಣಲು ಸಾಧ್ಯವಿದೆ.

ಹರಿಹರನ ವಿವರಣೆಯಲ್ಲಿ ಬರುವ ಭಕ್ತರ ಬೋನ ಅಥವಾ ನೈವೇದ್ಯ, ಆತಿಥ್ಯ, ಅಮೃತಾನ್ನಗಳೆಲ್ಲವೂ ದೇಹ ಮತ್ತು ದೈವವೆಂಬ ಸಾಮಾನ್ಯ ವ್ಯಕ್ತಿಯ ಒಡಲ ಬಯಕೆಗಳಿಗೆ ಪ್ರೇರಣೆಯಾಗಿ ಒಪ್ಪುವ ರೀತಿಯಲ್ಲಿರಬೇಕೆನ್ನುವುದು ಇಲ್ಲಿನ ಆಹಾರದ ಪರಿಕಲ್ಪನೆಯ ಮುಖ್ಯ ಅಂಶವೆಂದು ಗಮನಿಸಬೇಕಾಗಿದೆ. 'ಲಿಂಗಾರ್ಪಿತವಾದುದೆಲ್ಲ ಶುದ್ಧ, ಉಳಿದುದೆಲ್ಲಾ ಜೀವನ್ಮಯ ಕಾಣಾ' ಎಂಬ ಅಲ್ಲಮನ ಮಾತನ್ನು ಹರಿಹರನು ಪ್ರಭುದೇವರ ರಗಳೆಯಲ್ಲಿ 'ದೇಹಾದಿಗುಣಗಳಂ ಮೀರಿದವನಲ್ಲಮಂ' ಎಂಬ ಮಾತಿನಲ್ಲಿ ಸಂಯೋಜಿಸುತ್ತಾ ದೇಹಕ್ಕೆ ಅರ್ಪಿತವಾಗುವ ಆಹಾರವು ದೇಹ ಮತ್ತು ಮನಸ್ಸನ್ನು ಶುದ್ಧವಾಗಿಡುವ ರೀತಿಯಲ್ಲಿದ್ದಾಗ ಮಾತ್ರ ಅದು ಲಿಂಗಕ್ಕೆ ಅರ್ಪಿತವಾಗಲು ಯೋಗ್ಯ. ಆಗ ಅದು ಜೀವ ಮತ್ತು ದೈವದ ಏಕತೆಯ ಪ್ರಾತಿನಿಧಿಕವಾದ ಬೇಡಿಕೆಯನ್ನು ಈಡೇರಿಸಲು ಸಾಧ್ಯವಿದೆ. ಹಾಗಾಗಿ ಲಿಂಗಾರ್ಪಿತವಾಗುವ ಬೋನವೆಂದರೆ ಶ್ರಮದಿಂದ, ಕಾಯಕದಿಂದ ದಾಸೋಹದ ಮೂಲಕ ಪ್ರಸಾದ ಸ್ವರೂಪ ಪಡೆದುಕೊಂಡಾಗ ಶಿವನಿಗೆ ಸ್ವೀಕಾರಾರ್ಹವಾಗುತ್ತದೆ ಅರ್ಥಾತ್ ಜೀವಸ್ವೀಕಾರಯೋಗ್ಯವಾಗುತ್ತದೆ. ಇಂತಹ ಆಹಾರವನ್ನೊಳಗೊಂಡ ಬೋನವೇ ಶುದ್ಧವಾಗಿರುವಂತದ್ದು ಎನ್ನುವ ರೀತಿಯಲ್ಲಿ ಹರಿಹರನ ರಗಳೆಗಳಲ್ಲಿನ ಆಹಾರ ಪರಿಕಲ್ಪನೆ ಕೇವಲ ಅಮೃತವಾಗಿರದೇ ಕಾಯಕನಿಷ್ಠೆಯ ಹಿನ್ನಲೆಯಲ್ಲಿ ಭಕ್ತಿಯಮೃತವಾಗಿ ಪರಿಣಮಿಸುತ್ತದೆ.

ಶೈವ ಮತ್ತು ಜೈನ ಮತಗಳ ತಾತ್ವಿಕ ಸಂಘರ್ಷಗಳ ಪ್ರಾಸಂಗಿಕ ವಿಷಯವಸ್ತುವಿನೊಂದಿಗೆ ಚರ್ಚೆಯಾಗುವ ಆದಯ್ಯನ ರಗಳೆ ಮುಖ್ಯವಾಗಿ ಇಲ್ಲಿ ಆಹಾರದ ಹಿನ್ನಲೆಯಲ್ಲಿ ಪ್ರಸ್ತಾಪಿಸುವುದು ಉಚಿತವೆನಿಸುತ್ತದೆ. ಶಿವನಿಗೆ ಅಥವಾ ಹಸಿದು ಬಂದ ಶರಣನಿಗೆ ನೀಡಬೇಕಾದ ಅನ್ನ ಅಥವಾ ಇನ್ನಾವುದೇ ಆಹಾರವು ಜೈನ ಸನ್ಯಾಸಿಗೆ ನೀಡಿದಾಗ ಅದು ಯಾವುದಕ್ಕೆಲ್ಲಾ ಹೋಲಿಕೆಯಾಗುತ್ತಾ ಆ ಆಹಾರವು ಶ್ರೇಷ್ಠತೆಯ ಮೌಲ್ಯ ಕಳೆದುಕೊಳ್ಳುತ್ತದೆಂಬುದನ್ನ ಆದಯ್ಯನ ರಗಳೆಯಲ್ಲಿ ಪದ್ಮಾವತಿ ಮಾಡಿದ ಅಮೃತಾನ್ನವನ್ನು ಬಣಗು ದೈವಕ್ಕೆ ನೀಡುವ ಸಂದರ್ಭದಲ್ಲಿ ಕಾಣುತ್ತೇವೆ. ಆದಯ್ಯ ಮತ್ತು ಪ್ರೇಯಸಿ ಪದ್ಮಾವತಿ ಇಬ್ಬರೂ ವ್ಯಾಘ್ರಪುರದ ವನವೊಂದರಲ್ಲಿ

ಪರಸ್ಪರ ಪ್ರೇಮದಲ್ಲಿದ್ದಾಗ ತಪೋಧನಮೂರ್ತಿಯೆಂಬ ಮುನಿಯ ವೇಷದಲ್ಲಿ ಬರುವ ಶಿವನು ಉಪವಾಸದಿಂದ, ಹಸಿವಿನಿಂದ ಕಂಗೆಟ್ಟವನಂತೆ ಎದುರು ಬಂದು ಹಸಿವನ್ನ ನೀಗಿಸಲು ಬಿನ್ನೈಸುತ್ತಾನೆ. ಆದಯ್ಯನು ಪದಾರ್ಥಗಳನ್ನು ತಂದುಕೊಟ್ಟರೆ ಪದ್ಮಾವತಿಯು ಆ ಪದಾರ್ಥಗಳನ್ನು ಮನೆಗೆ ತಂದು ಅಮೃತಾನ್ನವನ್ನು ಸಿದ್ಧಪಡಿಸುತ್ತಾಳೆ. ಇದೇ ಸಂದರ್ಭದಲ್ಲಿ ಕಂಚದ ಖೂಳರೆಂಬ ದುಷ್ಟ ಭಂಡರು ಬಂದು ಮನೆಮುಂದೆ ನಿಂತುದನ್ನು ಕಂಡು ಪದ್ಮಾವತಿಯ ತಂದೆಯು ಗೊರವನೆಂಬ ತಪೋಧನಮೂರ್ತಿಗೆ ಮಾಡಿದ ಆ ಅಮೃತಾನ್ನವನ್ನ ಆ ಕಂಚದ ಖೂಳರಿಗೆ ನೀಡಲು ಹೇಳುವ ಸಂದರ್ಭವನ್ನು ಹರಿಹರ ಹೀಗೆ ವರ್ಣಿಸುತ್ತಾ

"ಕೆಸರ ಕೊರತೆಗೆ ಕತ್ತುರಿಯಂ ಕೊಳ್ವಂತೆ
ಸುಣ್ಣದ ಕೊರತೆಗೆ ಬೆಳ್ದಿಂಗಳಂ ಕೊಡುವಂತೆ
ಮಸಿಯ ಕೊರತೆಗೆ ಮಾಣಿಕವಂ ಕೊಡುವಂತೆ
ಬೇಲಿಯ ಕೊರತೆಗೆ ಕಲ್ಪತರುವ ತರಿವಂತೆ
ಕಸದ ಕೊರತೆಗೆ ಕರ್ಪೂರದ ರಜವಂ ಬೆರಿಸುವಂತೆ"

ಎಂದು ಗೊರವನಿಗೆ ಸಿದ್ಧಪಡಿಸಿದ ಅಮೃತಾನ್ನವನ್ನು ಜೈನ ಸನ್ಯಾಸಿಗಳಿಗೆ ನೀಡೆಂದು ಹೇಳಿದ ಸಂದರ್ಭವನ್ನು ಪ್ರಸ್ತಾಪಿಸುತ್ತಾನೆ.

ಶೈವ ಮತ್ತು ಜೈನ ಮತದ ಸಂಘರ್ಷದ ಪ್ರಾತಿನಿಧಿಕವಾಗಿ ಹರಿಹರನು ಇಲ್ಲಿ ತನ್ನ ಶೈವ ಮತದ ಶ್ರೇಷ್ಠತೆಯನ್ನು ಸಾರಲು ಆಹಾರವನ್ನು ಗೊರವನಿಗೆ ಬೋನವಾಗಿ ನೀಡಿದರೆ ಅಮೃತವಾಗುತ್ತದೆ. ಆದರೆ ಜೈನ ಸನ್ಯಾಸಿಗಳನ್ನು ಬೆತ್ತಲೆ ಬ್ರಷ್ಟರು ಎನ್ನುತ್ತಾ ಅವರನ್ನು ಕೆಸರಿಗೆ, ಸುಣ್ಣಕ್ಕೆ, ಮಸಿಗೆ, ಕಸಕ್ಕೆ ಹೋಲಿಸುತ್ತಾ ತಪೋಧನಮೂರ್ತಿಗೆ ಸಿದ್ಧಪಡಿಸಿದ ಆಹಾರವನ್ನು ಕಸ್ತೂರಿಗೆ, ಬೆಳದಿಂಗಳಿಗೆ, ಮಾಣಿಕ್ಯಕ್ಕೆ, ಕಲ್ಪತರು ಮತ್ತು ಕರ್ಪೂರಕ್ಕೆ ಹೋಲಿಸಿ ಆಹಾರ ಸ್ವೀಕರಿಸುವ ಪ್ರಕ್ರಿಯೆಯಲ್ಲಿಯೂ ಕೂಡ ಸೇವಿಸುವ ವ್ಯಕ್ತಿಗಳಿಗೆ ತಕ್ಕಂತೆ ಅದರ ಶ್ರೇಷ್ಠತೆ ನಿರ್ಧಾರವಾಗುತ್ತದೆ ಎನ್ನುವ ರೀತಿಯಲ್ಲಿ ಈ ಚಿತ್ರಣ ಕಂಡುಬರುತ್ತದೆ. ಈ ಪ್ರಸಂಗವನ್ನು ಮುಂದುವರೆಸುತ್ತಾ

"ಕಾಡುಗಿಚ್ಚಿಂಗೆ ತುಯ್ಯಲ ಸುಡುವಂತೆ

ಸುಧೆಯಂ ನಾಯಿಗೆರೆವಂತೆ

ಪಂಚಭಕ್ಷ್ಯಯಂ ವಾಯಸಂಗಿಕ್ಕುವಂತೆ(ಕಾಗೆಗಿಕ್ಕುವಂತೆ)

ಫಳರಸಂ ಬಕಂಗಿಕ್ಕುವಂತೆ"

ತಂದು ಬೆತ್ತಲೆಯ ಬಣಗುಗಳಿಗಿಕ್ಕಿದ ಎಂದು ಹೇಳುತ್ತಾನೆ. ಗೊರವನಿಗೆ ಬೋನವಾಗಬೇಕಾದ ಅಮೃತಾನ್ನವೆಂಬ ನೈವೇದ್ಯವು ಜೈನ ಯತಿಗಳ ಪಾಲಾದಾಗ ಶಿವಭಕ್ತನಾದ ಆದಯ್ಯನಿಗೆ ಉಗ್ರಕೋಪ ಬರುತ್ತದೆ. ಜೈನನಾದ ಪದ್ಮಾವತಿಯ ತಂದೆಯೊಂದಿಗೆ ಕಲಹವೇರ್ಪಟ್ಟು ಸವಾಲು ಹಾಕಿ ಸೌರಾಷ್ಟ್ರ ಸೋಮೇಶ್ವರನನ್ನು ಆ ಊರ ಬಸದಿಯೊಳಗೆ ಪ್ರತಿಷ್ಠಾಪನೆ ಮಾಡುತ್ತಾನೆ. ಶೈವ ಮತದ ಪ್ರತಿಷ್ಠಾಪನೆಯೇ ಈ ರಗಳೆಯ ಪ್ರಧಾನ ಆಶಯವಾಗಿ ಪ್ರಸ್ತಾಪವಾಗುವುದರ ಜೊತೆಗೆ ಪಂಚಭಕ್ಷ ್ಯಯ, ಅಮೃತಾನ್ನವೆಂಬ ಬೋನವು ಕೂಡ ಅದು ಸೇರುವ ದೇಹದ ಧರ್ಮವನ್ನಾಧರಿಸಿ ಶ್ರೇಷ್ಠತೆಯನ್ನು ಪ್ರತಿನಿಧಿಸುವುದು ಆ ಕಾಲದ ಧಾರ್ಮಿಕ ಸಂಘರ್ಷಗಳ ಅಭಿವ್ಯಕ್ತಿಗೆ ವಸ್ತುವಾಗಿರುವುದನ್ನು ಈ ಕಾಲಕ್ಕೆ ತಕ್ಕಂತೆ ಮತ್ತು ಅದು ಸಾರ್ವಕಾಲಿಕ ಸಂಗತಿಯೆಂಬಂತೆ ಪ್ರಸ್ತುತವಾಗುತ್ತದೆ. ಇಂದಿಗೂ ಕೂಡ ಯಾವ ಆಹಾರ ಯಾರು ಸೇವಿಸಿದರು? ಎನ್ನುವುದರ ಮೇಲೆ ಅದು ಆಹಾರ ಹೌದೋ ಅಲ್ಲವೋ ಎನ್ನುವುದು ನಿರ್ಧಾರವಾಗುತ್ತಿರುವ ಈ ಕಾಲಘಟ್ಟದಲ್ಲಿ ಹದಿಮೂರನೇ ಶತಮಾನದ ಹರಿಹರನ ರಗಳೆಯಲ್ಲಿ ವ್ಯಕ್ತವಾಗುವ ಈ ಬೋನವೆಂಬ ಆಹಾರ ಪರಿಕಲ್ಪನೆಯ ಮೂಲಕ ಪ್ರಾತಿನಿಧಿಕವಾಗಿ ಮಹತ್ವ ಪಡೆದುಕೊಳ್ಳುತ್ತದೆ.

ಆಹಾರಕ್ಕೆ ಬೇಕಾದ ಪದಾರ್ಥಗಳು, ಧಾನ್ಯಗಳ ಪ್ರಸ್ತಾಪ ಕೂಡ ಕೆಲವೊಂದು ರಗಳೆಗಳಲ್ಲಿ ಪಸ್ತಾಪವಾಗಿರುವುದು ಕಂಡುಬರುತ್ತದೆ. ಬಹುತೇಕ ಸಸ್ಯಾಹಾರ ಕ್ರಮದ ಪದಾರ್ಥಗಳೇ ಈ ರಗಳೆಗಳಲ್ಲಿ ಕಂಡುಬರುವುದರಿಂದ ಜೋಳ, ಭತ್ತ, ಮತ್ತು ಈ ಧಾನ್ಯಗಳ ಕೆಲವು ತಳಿಗಳ ಹೆಸರುಗಳು ಕೂಡಾ ಅಲ್ಲಲ್ಲಿ ಪ್ರಸ್ತಾಪವಾಗುತ್ತವೆ. ಉದಾಹರಣೆಗೆ ರೇವಣಸಿದ್ದೇಶ್ವರ ರಗಳೆಯ ಎರಡನೇ ಸ್ಥಳದಲ್ಲಿ 'ಮಾನಕ್ಕಿಯೆಂಬ ಭತ್ತದ ಪ್ರಸ್ತಾಪ ಮತ್ತು ಮಾನಕ್ಕಿಯ ಅಂಬಕಳಿಯೆಂಬ ಗಂಜಿಯ ಪ್ರಸ್ತಾಪ ಅಥವಾ ಅಂಬಲಿಯ ಪ್ರಸ್ತಾಪ ಬರುತ್ತದೆ. ತಾನು ಉಣುವ ಆಹಾರದ ಬಗ್ಗೆಯೂ ಕೂಡ ಪ್ರಸ್ತಾಪಿಸುವ ರೇವಣಸಿದ್ಧ, ರಾಜನಾದ ವಿಕ್ರಮಾದಿತ್ಯನಿಗೆ ಹೇಳುತ್ತಾ "ಉಡುವೊಡೆ ದಿವ್ಯಾವಸ್ತ್ರಂ, ತೊಡುವೊಡೆ ದಿವ್ಯಾಭರಣಮಂ, ಉಣ್ಬೊಡಮೃತಾನ್ನಂ" ಎನ್ನುತ್ತಾನೆ. ಇಲ್ಲಿ ಅಮೃತಾನ್ನದ ಸ್ವರೂಪ ಅಥವಾ ಪದಾರ್ಥದ ಯಾವ ವಿವರಣೆಯೂ ಪ್ರಸ್ತಾಪವಾಗುವುದಿಲ್ಲ. ಹಾಗಾಗಿ ಅಲ್ಲಮ ಹೇಳಿದ ಹಾಗೆ ಲಿಂಗಾರ್ಪಿತವಾದುದೆಲ್ಲವೂ ಶುದ್ಧ ಎಂಬ ಮಾತಿನಂತೆ ತಾನು ಸೇವಿಸುವ ಆಹಾರವೆಲ್ಲವೂ ಅಮೃತ ಎಂದು ಗ್ರಹಿಸಬೇಕಾಗುತ್ತದೆ. ಜಾತಿ, ಕುಲ, ವೃತ್ತಿ, ಶ್ರೀಮಂತಿಕೆ ಬಡತನವೆಂಬ ಭೇದವರಿಯದ ಸ್ವೀಕಾರಾರ್ಹ ಆಹಾರವೇ ಅಮೃತ ಎನ್ನುವುದು ಇಲ್ಲಿನ ತಾತ್ಪರ್ಯ. ಇದೇ ರೇವಣಸಿದ್ಧೇಶ್ವರರ ರಗಳೆಯಲ್ಲಿ ಬರುವ ಮಾಯಿದೇವಿಯೆಂಬ ಪಣ್ಯಾಂಗನೆಯ ಮನೆಯ ಅನ್ನವನ್ನು ಸ್ವೀಕರಿಸುವ ಸಂದರ್ಭವನ್ನು ಕಾಣುತ್ತೇವೆ.

ಇಲ್ಲಿ ಮಾಯಿದೇವಿಯು ವೃತ್ತಿಯಲ್ಲಿ ವೇಶ್ಯೆಯಾಗಿದ್ದ ಕಾರಣ ಅವಳ ಮನೆಯ ಆಹಾರವು ಸ್ವೀಕಾರಾರ್ಹವಲ್ಲ ಎಂಬ ಸಾಮಾಜಿಕ ಮನೋಭಾವವು ಅವಳಲ್ಲಿ ಸಹಜವಾಗಿ ಕೀಳರಿಮೆಯನ್ನುಂಟು ಮಾಡಿರುತ್ತದೆ. ಹೀಗಿರುವಾಗ ರೇವಣಸಿದ್ಧೇಶ್ವರರು ಅವಳ ಮನೆಯ ಮಾರ್ಗದಿಂದ ಹೋಗುತ್ತಿರುವಾಗ "ಎಲೆಯಯ್ಯಾ ಅಕ್ಕಟಲೆ ಮರುಳೈಯ್ಯ ಎಲೆ ಅರಿಮರುಳ ಅನ್ನವನುಣಲ್ಬಡೆಯದೆ ಬನ್ನಬಟ್ಟುದರಿಂದೆಮ್ಮ ಮನೆಗೊಮ್ಮೊಮ್ಮೆ ಕಂಬಿಯಗ್ಗವಣಿಯಂ ತಂದೆಮಗುಳ್ಳೆಂಬ ಕಳಮನುಂಡು ಸುಖಿಯಾಗಿರ್ಪುದೆನಲಾ ಮಾತಂ ಕೈಕೊಂಡು ಅಂತವರ ಮನೆಯೊಳ್ ಶಿವನ ಬೆಸನಿಂ ಕೆಲವು ದಿನಮಿರಲ್" ಇಲ್ಲಿ ಮಾಯಿದೇವಿಯ ಮನೆಯ ಆಹಾರಕ್ಕೆ ಕೀಳರಿಮೆಯ ಆರೋಪವನ್ನು ಹೊರಿಸಿದ್ದು ಮತ್ತು ಅವಳ ಮನೆಯ ಅಂಬಕಳಿ(ಗಂಜಿ) ಸೇವಿಸಿ ಆ ಆಹಾರಕ್ಕಂಟಿದ ಅಪವಾದವನ್ನು ಅಳಿಸಿ ಹಾಕುವ ಮೂಲಕ ಭಕ್ತಿ ಮತ್ತು ಪ್ರೀತಿಯಿಂದ ಮಾಡಿದ ಎಲ್ಲಾ ಆಹಾರವೂ ಕೂಡ ಅಮೃತಾನ್ನವೆಂದು ರೇವಣಸಿದ್ಧೇಶ್ವರ ರಗಳೆಯ ಈ ಸಂದರ್ಭದ ಮೂಲಕ ಪ್ರಸ್ತಾಪಿಸಲಾಗಿದೆ.

ಮಾಂಸಾಹಾರದ ಬಗ್ಗೆ ಎಲ್ಲಿಯೂ ನೇರವಾದ ಪ್ರಸ್ತಾಪ ಬರದಿದ್ದರೂ ಕೂಡ ಮಾಂಸಾಹರದ ಪದ್ದತಿ ಕೂಡಾ ಇತ್ತೆಂಬುದರ ಸಂಗತಿ ರೇವಣಸಿದ್ದೇಶ್ವರರ ರಗಳೆಯಲ್ಲಿ ಕಂಡುಬರುತ್ತದೆ. ರೇವಣಸಿದ್ಧನು ಎರಡು ಉಕ್ಕಿನ ಗುಂಡುಗಳನ್ನು ತಂದು ಮಾಸನೂರಿನ ಕಮ್ಮಾರನ ಕೈಯಲ್ಲಿ ಕೊಟ್ಟಾಗ ಒಂದು ಉಕ್ಕಿನ ಗುಂಡು ಕಠಾರಿಯಾಗುತ್ತದೆ. ಮತ್ತೊಂದು ಉಕ್ಕಿನ ಗುಂಡನ್ನು ಯಾವ ರೀತಿ ಕಾಯಿಸಿ ಬಡಿದರೂ ಕೂಡ ಗಟ್ಟಿಯಾಗಿ ಹಾಗೆಯೇ ಇರುವಾಗ ಆ ಕಮ್ಮಾರನ ಮುಂದೊಬ್ಬನು ಹೊಸ ಮಾಂಸವೆಂಬ 'ಪಿಶಿತ'ವನ್ನು ತೆಗೆದುಕೊಂಡು ಹೊಗುತ್ತಿರುತ್ತಾನೆ. ಆ ಮಾಂಸವನ್ನು ಕಂಡು ಆ ಉಕ್ಕಿನ ಗುಂಡು ಜಿಗಿದಾಡುತ್ತದೆ. ಆಗ ಆ ಪಿಶಿತವೆಂಬ ಬಾಡೂಟವನ್ನು ತೋರಿಸುತ್ತಾ ಆ ಉಕ್ಕಿನ ಗುಂಡನ್ನು ಖಡ್ಗದ ರೂಪಕ್ಕೆ ತರುತ್ತಾನೆ. ಈ ಪ್ರಸಂಗದಲ್ಲಿ 'ಪಿಶಿತ' ಎಂಬ ಮಾಂಸಾಹಾರದ ಪದಾರ್ಥದ ಸಂದರ್ಭದ ವರ್ಣನೆಯಿದೆ. ಸಿದ್ಧ ಪರಂಪರೆಯನ್ನು ಪ್ರತಿನಿಧಿಸುವ ಈ ಉಕ್ಕಿನ ಅಥವಾ ಲೋಹದ ವಸ್ತುವು ಬಾಡೂಟವನ್ನು ಕಂಡು ಕ್ರಿಯಾಶೀಲವಾಗುವ ಈ ಪ್ರಕ್ರಿಯೆಯನ್ನು ರಸಸಿದ್ಧಾಂತದ ಮೂಲಕ ವಿಶ್ಲೇಶಿಸಿದರೆ ಮತ್ತಷ್ಟು ಹೊಸ ಗ್ರಹಿಕೆಗಳು ಬರಲು ಸಾಧ್ಯವಿದೆ ಎಂದೆನಿಸುತ್ತದೆ.

ಪ್ರಸಾದದ ಹಿನ್ನಲೆಯಲ್ಲಿ ಜೋಳ ಮತ್ತು ಗುಂಜಾಸುಬೀಜದ ಪ್ರಸಂಗವು ಶಂಕರ ದಾಸಿಮಯ್ಯನ ರಗಳೆಯಲ್ಲಿ ಬರುತ್ತದೆ. ಶಿವನಿಗೆ ಅಥವಾ ಜಡೆಶಂಕರನಿಗೆ ಪ್ರಸಾದ ಸಿದ್ಧಪಡಿಸಲು ಮಯೂರಪುರದೊಳಗೆ ಧಾನ್ಯ ಸಂಗ್ರಹದ ಕಾರ್ಯಕ್ಕಾಗಿ ಬಂದ ಶಂಕರದಾಸಿಮಯ್ಯನು ಶಿವಭಕ್ತನೊಬ್ಬನ ಮನೆಮುಂದೆ ನಿಂತು ಧಾನ್ಯ ಕೇಳಿದಾಗ 'ಮನೆಯವರ್ಜೋಳವಿಲ್ಲದೆ ಶಂಕರಗಂಡಂ ಪಿರಿದೈಯ್ಯ ಪಿರಿದೆಂದು ನುಡಿಯೆ ಜೋಳದ ಪೆಸರ್ ಶಂಕರಗಂಡನ

ಪೆಸರೆ" ಎಂದು ನುಡಿಯುತ್ತಾನೆ. ಶಿವನ ಪ್ರಸಾದಕ್ಕಾಗಿ ಜೋಳ ಸಿಗದೆ ಮರಳಿ ಜಡೆಯ ಶಂಕರನಲ್ಲಿಗೆ ಬಂದು "ದೇವ ದೇವ ಚಂದ್ರಧರ ಸಸ್ಯಾಧಿಪತಿಯೇ ಜೋಳದ ಪೆಸರುಂ ನಿನ್ನ ಪೆಸರಾಗಿರ್ದಿಪುದುರಿದೆಂದು ಕೇಳ್ ವಾಳಿಯವನಲ್ಲದೆ ಜೋಳವಾಳಿಯವನಲ್ಲ ದೇವ" ಎಂದು ಭಕ್ತನಾದವನು ಜೋಳವಾಳಿಯಾಗಿರದೆ ಭಕ್ತಿ ತುಂಬಿದ ವಾಳಿತನದ ವ್ಯಕ್ತಿತ್ವವನ್ನು ಶಂಕರದಾಸಿಮಯ್ಯನು ಪ್ರತಿನಿಧಿಸುತ್ತಾನೆ. ಅರಸನ ಅನ್ನದ ಋಣದಲ್ಲಿರುವ ಜೋಳವಾಳಿತನವನ್ನು ನೇರವಾಗಯೇ ತಿರಸ್ಕರಿಸುವ ಶಿವಭಕ್ತನ ಮೂಲಕ ಹರಿಹರನು ತನ್ನಲ್ಲಿರುವ ಸಾವವರ ಮೇಲೆ ಕಾವ್ಯ ಬರೆಯದಿರುವುದನ್ನು ವಿಸ್ತರಿಸುವ ರೀತಿಯಲ್ಲಿ ಆಳುವವರ ಪರವಾಗಿಯೂ ಕಾವ್ಯ ಬರೆಯುವುದಿಲ್ಲ ಎನ್ನುವಂತೆ ತನ್ನ ಕಾವ್ಯನಾಯಕರಷ್ಟೇ ನಿಷ್ಟುರತೆಯನ್ನು ಹರಿಹರನು ಹೊಂದಿದ್ದನೆಂಬುದು ತಿಳಿದುಬರುತ್ತದೆ.

ಹರಿಹರನ ರಗಳೆಗಳಲ್ಲಿ ಶಂಕರದಾಸಿಮಯ್ಯನಿಂದ ಪ್ರಭುದೇವರವರೆಗೂ ಕೂಡ ಸಿದ್ಧ ಪರಂಪರೆಯ, ನಾಥ, ಲಾಕುಳ, ಲಕುಲೀಶ ಪಂಥವನ್ನು ಪ್ರತಿನಿಧಿಸುವ ವ್ಯಕ್ತಿತ್ವಗಳನ್ನು ಪ್ರತಿನಿಧಿಸುತ್ತಾರೆ. ಈ ಹಿನ್ನಲೆಯಲ್ಲಿಯೇ ಅನೇಕ ಬಗೆಯ ರಸಗಳ, ಲೋಹರಸಗಳ ಪ್ರಸ್ತಾಪ ಕಂಡುಬರುತ್ತದೆ. ಶಂಕರದಾಸಿಮಯ್ಯನ ರಗಳೆಯಲ್ಲಿ ಶಿವನ ಪ್ರಸಾದದ ರೂಪದಲ್ಲಿ ಬರುವ ಲೋಹರದ ಸ್ಫಟಿಕದ ಜೀರ್ಣಚೂರ್ಣದ ಸಂದರ್ಭ ಕಂಡುಬರುತ್ತದೆ. ಶಂಕರದಾಸಿಮಯ್ಯನು ಜಡೆಶಂಕರನ ಪ್ರಸಾದಕ್ಕೆ ಜೋಳ ಸಿಗದಿದ್ದಾಗ ಜಡೆ ಶಂಕರನನ್ನು ಕುರಿತು ನಿನ್ನೊಲವಿನಿಂದ ಸಲುಹೆನಗೆ ಎಂದು ಕೇಳಿಕೊಂಡಾಗ ಜಡೆಶಂಕರನು ಪ್ರಸಾದಕ್ಕಾಗಿ ಸಿದ್ಧಪಡಿಸಬೇಕಾದ ಪ್ರಕ್ರಿಯೆಯನ್ನು ಈ ರೀತಿ ಹೇಳುತ್ತಾನೆ "ಎಲೆ ಮಗನೆ ನಿಶ್ಯಂಕ ಶಂಕರ ದಾಸಿಮಯ್ಯ ನೀನೊಲ್ಲದೋಳ್ ನಮಗೇಕೆ? ನಿನಗೆ ಸುಖವಾಗಿರ್ಪ ಲೋಕವಿರೋಧವಾಗಿರ್ಪ ಲೋಹರದ ಹಳುಕುಮಂ ಜೀರ್ಣಚೂರ್ಣಮಂ ಗಂಜಾಸುಬೀಜಮನೊಡಕೂಡಿ ಅರೆದು ಎಮಗಿತ್ತುದಂದಿಂಗೆ ಪ್ರಸಾದಮಂ ಕೈಕೊಂಡು ಎಮಗೆ ತೃಪ್ತತೆಯನೊಳಕೊಂಡು ಪ್ರಸಾದ ಪಥ್ಯ ಹೃದಯನಾಗಿ ಸುಖವಾಗಿರ್ಪುದು" ಎನ್ನುತ್ತಾನೆ. ಇಲ್ಲಿ ಬರುವ ಲೋಹರದ ಹಳುಕ(ಸ್ಫಟಿಕ)ವನ್ನು ಅರಗಿಸುವ ಮತ್ತು ಗುಂಜಾಸು ಬೀಜ ಅಂದರೆ ಆಗಿನ ಕಾಲದಲ್ಲಿ ಅಕ್ಕಸಾಲಿಗರು ಚಿನ್ನವನ್ನು ತೂಕ ಮಾಡಲು ಬಳಸುವ ಗುಲಗಂಜಿ ಬೀಜಗಳನ್ನು ಅರೆದು ಚೂರು ಮಾಡಿ ಒಟ್ಟಿಗೆ ಆ ಲೋಹದ ಸ್ಫಟಿಕದ ಚೂರುಗಳೊಂದಿಗೆ ಸೇರಿಸಿ ಅರೆದು ಕೊಟ್ಟರೆ ಅದೇ ನನಗೆ ಪ್ರಸಾದ ಎಂದು ಹೇಳುತ್ತಾನೆ. ಗುಲಗಂಜಿ ಬೀಜಗಳು ಅತಿ ವಿಷಕಾರಿಯಾಗಿರುವಂತಹವು. ಇಂತಹ ವಿಷದ ಅಂಶ ಒಳಗೊಂಡಿರುವ ಗುಲಗಂಜಿ ಮತ್ತು ರಸ ಸಿದ್ಧಾಂತವನ್ನು ಪ್ರತಿನಿಧಿಸುವ ಲೋಹದ ಸ್ಫಟಿಕದ ಚೂರುಗಳನ್ನೊಳಗೊಂಡಿರುವ ಈ ಪದಾರ್ಥವು ಪ್ರಸಾದದ ರೂಪ ಪಡೆದುಕೊಳ್ಳುತ್ತದೆ. ಹಾಗಾಗಿ ಶಾಕ್ತ, ಶೈವ ಪಂಥದ ಆಹಾರ ಕ್ರಮದ ಬಹುಮುಖ್ಯ ಅಂಶಗಳನ್ನು ಕೂಡ ಈ

ರಗಳೆಗಳಲ್ಲಿ ಗುರುತಿಸಲು ಸಾಧ್ಯವಿದೆ. ಈ ಕಾರಣಕ್ಕಾಗಿಯೇ ಹರಿಹರನ ಕಾವ್ಯಗಳಲ್ಲಿ ಎಲ್ಲ ರಸಮಯಗಳೂ ಶಿವಮಯ ಮತ್ತು ಎಲ್ಲ ಶಿವಮಯಗಳೂ ರಸಮಯಗಳಾಗುತ್ತವೆ. ಶಂಕರ ದಾಸಿಮಯ್ಯನಲ್ಲಿ ಧಾನ್ಯದ ರೂಪವಾದ ಜೋಳವು ಶಿವನ ಹೆಸರಾದರೆ, ರುದ್ರಪಶುಪತಿಯ ರಗಳೆಯಲ್ಲಿ ಶಿವನ ಸ್ಮರಣೆಯೇ ಜೀವರಸವಾಗುತ್ತದೆ ಎನ್ನುವುದನ್ನು ಹರಿಹರನು "ಶಿವನ ನೆನಹೆಂಬ ಫಲಮಂ ಪಡೆದು ಜೀವಿಪಂ, ಶಿವನ ಪರಮ ಸ್ನೇಹರಸಮುಮಂ ಸೇವಿಪಂ" ಎಂದು ನುಡಿಯುತ್ತಾನೆ.

ಅತಿಭಕ್ತನೆಂಬ ಕೈವರ್ಥನ ನಿಷ್ಠೆಯನ್ನು ಕುರಿತು ಬರುವ ಅತಿಭಕ್ತನ ರಗಳೆಯಲ್ಲಿ ಮೀನನ್ನು ಶಿವನಿಗೆ ಪ್ರಿಯಾರ್ಥದಿಂದ ಅರ್ಪಿಸುವ ಅತಿಭಕ್ತನ ನೇಮನಿಷ್ಠೆಯ ಪ್ರಸ್ತಾಪ ಬರುತ್ತದೆ. ಇಲ್ಲಿ ಅತಿಭಕ್ತನು ಮೂಲತಃ ಮೀನುಗಾರ, ಧೀವರ, ಅಥವಾ ಮೀಂಗುಲಿಗ ಸಮುದಾಯಕ್ಕೆ ಸೇರಿದ ಮತ್ತು ಮೀನನ್ನೇ ಮುಖ್ಯ ಆಹಾರ ಪದ್ಧತಿಯಾಗಿ ಸೇವಿಸುವ ಶಿವನ ಭಕ್ತನಾಗಿರುತ್ತಾನೆ. ಶಿವನ ಭಕ್ತನಾಗಿ ಜೀವನೋಪಾಯಕ್ಕಾಗಿ ಆಸರೆಯಾಗಿರುವ ಮೀನನ್ನು ಶಿವನಿಗೆ ಅರ್ಪಿಸುವ ಸಂದರ್ಭವನ್ನು ಇಲ್ಲಿ ಕಾಣುತ್ತೇವೆ. ಇಲ್ಲಿ ಅತಿಭಕ್ತನದೊಂದು ನಿಯಮವೇನೆಂದರೆ "ಮೊದಲೊಳು ಸಿಕ್ಕಿದ ಮೀನಂ ಬಿಡುವಂ , ಮದನಹರಗೆ ಪ್ರಿಯಾರ್ಥದಿ ಬಿಡುವಂ" ಎನ್ನುವ ಮೂಲಕ ಈ ಮೀನನ್ನು ಎಲ್ಲಿಯೂ ಕೂಡ ಪ್ರಸಾದ, ಅಮೃತ, ಅಥವಾ ಇನ್ನಾವುದೇ ಆಹಾರದ ಕ್ರಮದಲ್ಲಿ ಇಲ್ಲಿ ಪ್ರಸ್ತಾಪಿಸದಿದ್ದರೂ ಕೂಡ ಲಿಂಗಾರ್ಪಿತವಾದುದೆಲ್ಲವೂ ಶುದ್ಧ ಎಂಬ ಮಾತಿನ ಹಿನ್ನಲೆಯಲ್ಲಿ ಮತ್ತು ಹರಿಹರನ ಕಾವ್ಯನಾಯಕರೆಲ್ಲರೂ ತಮ್ಮತಮ್ಮ ವೃತ್ತಿಯ ಹಿನ್ನಲೆಯಲ್ಲಿ ಬರುವ ಅವರ ಪಾರಂಪರಿಕ, ಸಾಂಪ್ರದಾಯಿಕ ಆಹಾರವನ್ನೇ ಶಿವನಿಗೆ ಬೋನವಾಗಿ, ನೈವೇದ್ಯವನ್ನಾಗಿ ನೀಡುವ ಸಂದರ್ಭಗಳನ್ನು ಕಾಣುತ್ತೇವೆ. ಹಾಗಾಗಿ ಇಲ್ಲಿ ಅತಿಭಕ್ತನು ತನಗೆ ಸಿಗುವ ಮೊದಲ ಮೀನನ್ನು ಶಿವನಿಗೆ ಅರ್ಪಿಸುವ ಮೂಲಕ ಮತ್ತೆ ನದಿಗೆ ಬಿಡುತ್ತಾನೆ. ಅದನ್ನು ಶಿವನು ನಿಷ್ಠೆ ಮತ್ತು ಭಕ್ತಿಗೆ ಪ್ರತಿಕ್ರಿಯೆಯಂತೆ ಸ್ವೀಕರಿಸುತ್ತಾನೆ. ಆಹಾರದ ಅಥವಾ ಪ್ರಸಾದದ ರೂಪದಲ್ಲಿ ಅಭಿವ್ಯಕ್ತಿಸುವ ನಿಷ್ಠೆಯ ಭಕ್ತಿಯೆಲ್ಲವೂ ಶಿವನಿಗೆ ಸ್ವೀಕಾರಾರ್ಹವಾಗಿರುತ್ತದೆ. ಯಾವ ಭೇದವಿಲ್ಲದೇ ಸ್ವೀಕರಿಸುವ ಈ ವೈವಿಧ್ಯತೆಯ ಆಹಾರಕ್ರಮಗಳು ಭಕ್ತಿಯ ಮೂಲಕ ಏಕತೆಯನ್ನು ಸಾಧಿಸುವಲ್ಲಿ ಯಶಸ್ವಿಯಾಗುತ್ತವೆ. ಶಿವನ ಹೆಸರಿನಲ್ಲಿ ಪರಸ್ಪರ ಒಪ್ಪಿಕೊಳ್ಳುವ ಮತ್ತು ಅಪ್ಪಿಕೊಳ್ಳುವ ಎಲ್ಲಾ ಆಹಾರ ಪದ್ಧತಿಯ ಕ್ರಮವೊಂದನ್ನು ಇಲ್ಲಿ ಕಾಣಬಹುದಾಗಿದೆ.

ಹಣ್ಣು, ಧಾನ್ಯ, ವಿಷಬೀಜ, ಲೋಹದ ರಸ, ಓಗರ, ಕೀರು ಮುಂತಾದ ಈ ಎಲ್ಲಾ ಪದಾರ್ಥಗಳು ರಸಮಯವಾಗಿ ಶಿವನ ಭಕ್ತನ ಮೂಲಕ ಪ್ರಸಾದದ ವ್ಯಾಪ್ತಿಯೊಳಗೆ ಸೇರುತ್ತವೆ. ಇಲ್ಲಿ ಬರುವ ಶಿವನಿಗೂ ಹಾಗೂ ಭಕ್ತನಿಗೂ ಯಾವುದೇ ವ್ಯತ್ಯಾಸವಿಲ್ಲದ ರೀತಿಯಲ್ಲಿ ಈ ಆಹಾರ ಅಮೃತಾನ್ನವೆಂಬ ಪರಿಕಲ್ಪನೆಯು ಬರುವ

ಕಾರಣದಿಂದ ಸಾಮಾನ್ಯ ಭಕ್ತನೊಬ್ಬನ ವ್ಯಷ್ಠಿ ಪ್ರಜ್ಞೆಯ ಮತ್ತು ಶಿವನೆಂಬ ಸಮಷ್ಠಿ ಪ್ರಜ್ಞೆಯು ಸೇರಿ ಸಾಮಾನ್ಯ ಮನುಷ್ಯನ ಆಹಾರವನ್ನು ಶ್ರೇಷ್ಠತೆಯ ರೀತಿಯಲ್ಲಿ ಪರಿಗಣಿಸಿರುವ ಅಂಶವನ್ನು ಹರಿಹರನಲ್ಲಿ ಕಾಣುತ್ತೇವೆ. ಅಮೃತಾನ್ನವೆಂಬ ಈ ಆಹಾರದ ಮೂಲ ಶ್ರಮ, ಕಾಯಕ, ಮತ್ತು ನಿಯಮ ನಿಷ್ಠೆಗಳ ನೆಲೆಗಳಿಂದ ಬಂದಿರುವ ಕಾರಣ ಪ್ರಭುದೇವರ ರಗಳೆಯಲ್ಲಿ ಹೇಳಿದ ಹಾಗೆ ಶಿವನು ಎಲ್ಲಾ ಲೋಕಕ್ಕೆ ಹೊಸದೆಂಬಂತೆ ಆಹಾರವನ್ನು ಸ್ವೀಕರಿಸುತ್ತಾನೆ. ಎಲ್ಲಾ ರಗಳೆಗಳಲ್ಲಿ ಬರುವ ಬೋನ ಸ್ವೀಕರಿಸುವ, ಪ್ರಸಾದ ಸೇವಿಸುವ ಅಂಶಗಳನ್ನು ಸೇರಿಸಿ ಹರಿಹರ ಹೇಳಿದ ಹಾಗೆ "ಉಂಡನಭವಂ ಸ್ವರ್ಗ ಮರ್ತ್ಯಕ್ಕೆ ಪೊಸತಾಗಿ" ಎಂದು ವರ್ಣಿಸಲು ಸಾಧ್ಯವಿದೆ.

**ಪರಾಮರ್ಶನ ಗ್ರಂಥಗಳು**

೧.ಹರಿಹರನ ರಗಳೆಗಳು ಭಾಗ- ೨

ಅ.) ಪ್ರಭುದೇವರ ರಗಳೆ

ಬ.) ರೇವಣಸಿದ್ದೇಶ್ವರರ ರಗಳೆ

೨. ಹರಿಹರನ ರಗಳೆಗಳು ಭಾಗ- ೩ - ಸಂ: ಫ.ಗು ಹಳಕಟ್ಟಿ

ಅ.) ಶಂಕರದಾಸಿಮಯ್ಯನ ರಗಳೆ

ಬ.) ಆದಯ್ಯನ ರಗಳೆ

೩. ನಂಬಿಯಣ್ಣನ ರಗಳೆ

೪. ಬಸವರಾಜದೇವರ ರಗಳೆ - ಸಂ: ಟಿ.ಎಸ್ ವೆಂಕಣ್ಣಯ್ಯ

೫. ಅತಿಭಕ್ತನ ರಗಳೆ - ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾನಿಲಯ

೬. ಇಳೆಯಾಂಡ ಗುಡಿಮಾರರ ರಗಳೆ _ ಪ್ರಸಾರಂಗ ಮಂಗಳೂರು ವಿಶ್ವವಿದ್ಯಾನಿಲಯ

೭. ತಿರುನೀಲಕಂಠದೇವರ ರಗಳೆ - ಪ್ರಸಾರಂಗ ಮಂಗಳೂರು ವಿಶ್ವವಿದ್ಯಾನಿಲಯ

೮. ಹರಿಹರನ ರಗಳೆಗಳು - ಸಂ: ಎಂ.ಎಂ. ಕಲಬುರ್ಗಿ